ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಇಲ್ಲಿ ಉಪಪ್ರಶ್ನೆಗೆ ಉತ್ತರವನ್ನು ಕೊಡಬೇಕಲ್ಲವೆ ?

ಅಧ್ಯಕ್ಷರು : ಇದು ಉಪಪ್ರಶ್ನೆಗೆ ಸಂಬಂಧವಿಲ್ಲ.

ಪಶು ಚಿಕಿತ್ಸಾಲಯಗಳಲ್ಲಿ ಸಿಬ್ಬಂದಿ ಹಾಗೂ ಕಟ್ಟಡಗಳ ಕೊರತೆ

31(43) **ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)** :– ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಾಗಡಿ ಹಾಗು ರಾಮನಗರ ತಾಲ್ಲೂಕಿನಲ್ಲಿರುವ ಪಶು ಚಿಕಿತ್ಸಾಲಯಗಳಲ್ಲಿರುವ ಸಿಬ್ಬಂದಿ ಹಾಗೂ ಕಟ್ಟಡ ಕೊರತೆ ಇರುವುದು ನಿಜವೇ ;

(ಆ) ಈ ಕೊರತೆಯ ಬಗ್ಗೆ ಎಷ್ಟು ದಿನಗಳಲ್ಲಿ ಪರಿಹಾರ ಒದಗಿಸಲಾಗುವುದು ?

ಶ್ರೀ ರೇವೂ ನಾಯಕ್ ಬೆಳಮಗಿ (ಮಾನ್ಯ ಪಶುಸಂಗೋಪನ ಸಚಿವರು) :

(ಅ) ಹೌದು ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಸಿಬ್ಬಂದಿ

ಮಾಗಡಿ ತಾಲ್ಲೂಕಿನಲ್ಲಿ ಒಟ್ಟಾರೆ 24 ಪಶುವೈದ್ಯ ಸಂಸ್ಥೆಗಳೂ ಮಂಜೂರಾತಿ ಕಾರ್ಯನಿರ್ವಹಿಸಿದ್ದು, ಇವುಗಳಿಗೆ 100 ಹುದ್ದೆಗಳು ಮಂಜೂರಾಗಿವೆ. ಇವುಗಳಲ್ಲಿ 62 ಹುದ್ದೆಗಳು ಭರ್ತಿಯಾಗಿದ್ದು, 38 ಹುದ್ದೆಗಳು ಖಾಲಿ ಇದೆ. ಹುದ್ದೆಗಳ ವೃಂದವಾರು ವಿವರ ಈ ಕೆಳಕಂಡಂತಿದೆ :–

ಕ್ರಮ ಸಂಖ್ಯೆ	ಹುದ್ದೆ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ
1)	ಸಹಾಯಕ ನಿರ್ದೇಶಕರು	02	02	00
2)	ಪಶು ವೈದ್ಯಾಧಿಕಾರಿ	17	13	04
3)	ಪಶು ವೈದ್ಯಕೀಯ ಮೇಲ್ವಿಚಾರಕರು	02	02	00
4)	ಹಿರಿಯ ಪಶು ವೈದ್ಯಕೀಯ ಪರೀಕ್ಷಕರು	15	13	02
5)	ಪಶು ವೈದ್ಯಕೀಯ ಪರೀಕ್ಷಕರು	09	08	01

6)	ಪಶು ವೈದ್ಯಕೀಯ ಸಹಾಯಕರು	01	04	07
7)	ದ್ವಿತೀಯ ದರ್ಜೆ ಸಹಾಯಕರು	01	01	00
8)	ವಾಹನ ಚಾಲಕರು	01	01	00
9)	ಗ್ರೂಪ್-ಡಿ ನೌಕರರು	42	18	24
	ಒಟ್ಟು	100	62	38

ರಾಮನಗರ ತಾಲ್ಲೂಕಿನಲ್ಲಿ ಒಟ್ಟಾರೆ 30 ಪಶುವೈದ್ಯ ಸಂಸ್ಥೆಗಳೂ ಮಂಜೂರಾತಿ ಕಾರ್ಯನಿರ್ವಹಿಸಿದ್ದು, ಇವುಗಳಿಗೆ 119 ಹುದ್ದೆಗಳು ಮಂಜೂರಾಗಿವೆ. ಇವುಗಳಲ್ಲಿ 77 ಹುದ್ದೆಗಳು ಭರ್ತಿಯಾಗಿದ್ದು, 42 ಹುದ್ದೆಗಳು ಖಾಲಿ ಇದೆ. ಹುದ್ದೆಗಳ ವೃಂದವಾರು ವಿವರ ಈ ಕೆಳಕಂಡಂತಿದೆ :-

ಕ್ರಮ ಸಂಖ್ಯೆ	ಹುದ್ದೆ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ
1)	ಸಹಾಯಕ ನಿರ್ದೇಶಕರು	04	04	00
2)	ಪಶು ವೈದ್ಯಾಧಿಕಾರಿ	16	11	05
3)	ಪಶು ವೈದ್ಯಕೀಯ ಮೇಲ್ವಿಚಾರಕರು	05	03	02
4)	ಹಿರಿಯ ಪಶು ವೈದ್ಯಕೀಯ ಪರೀಕ್ಷಕರು	15	10	05
5)	ಪಶು ವೈದ್ಯಕೀಯ ಪರೀಕ್ಷಕರು	14	07	07
6)	ಪಶು ವೈದ್ಯಕೀಯ ಸಹಾಯಕರು	09	06	03
7)	ಪ್ರಥಮ ದರ್ಜೆ ಸಹಾಯಕರು	01	01	00
8)	ದ್ವಿತೀಯ ದರ್ಜೆ ಸಹಾಯಕರು	03	02	01
9)	ವಾಹನ ಚಾಲಕರು	01	01	00
10)	ಗ್ರೂಪ್-ಡಿ ನೌಕರರು	51	32	19
	ಒಟ್ಟು	119	77	42

ಕಟ್ಟಡಗಳು

ಮಾಗಡಿ ತಾಲ್ಲೂಕಿನಲ್ಲಿ 24 ಪಶುವೈದ್ಯ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದ್ದು, ಇವುಗಳಲ್ಲಿ 18 ಪಶುವೈದ್ಯ ಸಂಸ್ಥೆಗಳಿಗೆ ಸ್ವಂತ ಕಟ್ಟಡಗಳಿವೆ. 6 ಪಶುವೈದ್ಯ ಸಂಸ್ಥೆಗಳಿಗೆ ಕಟ್ಟಡಗಳು ಇರುವುದಿಲ್ಲ. ಅವುಗಳ ವಿವರ ಈ ಕೆಳಕಂಡಂತಿದೆ :–

ಕ್ರಮ ಸಂಖ್ಯೆ	ಪಶುವೈದ್ಯಕೀಯ ಸಂಸ್ಥೆಯ ಹೆಸರು
1)	ಪಶು ಚಿಕಿತ್ಸಾಲಯ, ಬ್ಯಾಲದಕೆರೆ
2)	ಪಶು ಚಿಕಿತ್ಸಾಲಯ, ಕಲ್ಯಾ
3)	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ, ಬಾಣವಾಡಿ
4)	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ, ತಗ್ಗೀಕುಪ್ಪೆ
5)	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ, ಕೆ.ಜಿ.ನಗರ
6)	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ, ಬೆಳಗವಾಡಿ

ರಾಮನಗರ ತಾಲ್ಲೂಕಿನಲ್ಲಿ 30 ಪಶುವೈದ್ಯ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದ್ದು, ಇವುಗಳಲ್ಲಿ 24 ಪಶುವೈದ್ಯ ಸಂಸ್ಥೆಗಳಿಗೆ ಸ್ವಂತ ಕಟ್ಟಡಗಳಿವೆ. 6 ಪಶುವೈದ್ಯ ಸಂಸ್ಥೆಗಳಿಗೆ ಕಟ್ಟಡಗಳು ಇರುವುದಿಲ್ಲ. ಅವುಗಳ ವಿವರ ಈ ಕೆಳಕಂಡಂತಿದೆ :–

ಕ್ರಮ ಸಂಖ್ಯೆ	ಪಶುವೈದ್ಯಕೀಯ ಸಂಸ್ಥೆಯ ಹೆಸರು
1)	ಪಶು ಚಿಕಿತ್ಸಾಲಯ, ಗಾಣಕಲ್ಲು
2)	ಪಶು ಚಿಕಿತ್ಸಾಲಯ, ಅಕ್ಕೂರು
3)	ಪಶು ಚಿಕಿತ್ಸಾಲಯ, ಇಟ್ಟಮಡು
4)	ಪಶು ಚಿಕಿತ್ಸಾಲಯ, ಬಿಳಗುಂಬ
5)	ಪಶು ಚಿಕಿತ್ಸಾಲಯ, ಎಸ್.ಆರ್.ಎಸ್. ಬೆಟ್ಟ
6)	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ, ಹುಣಸನಹಳ್ಳಿ

ಸಿಬ್ಬಂದಿ

ರಾಜ್ಯದಲ್ಲಿ ಖಾಲಿ ಇರುವ ಪಶುವೈದ್ಯಾಧಿಕಾರಿಗಳ ಹುದ್ದೆ ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದಿಂದ 200 ಹುದ್ದೆಗಳಿಗೆ ಪ್ರಕಟಣೆ ನೀಡಿದ್ದು, ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು ಪ್ರಕ್ರಿಯೆ ಪ್ರಾರಂಭವಾಗಿದೆ, ಹಾಗೂ ನಿವೃತ್ತಿ ಪಶುವೈದ್ಯರನ್ನು ಸಹ ಭರ್ತಿ ಮಾಡಲು ಸರ್ಕಾರದ ಆದೇಶ ಸಂಖ್ಯೆ ಪಸಂಮೀ.116 ಪ.ಸ.ಸೆ. 2008 ದಿನಾಂಕ: 11-7-2008 ರಂತೆ ಅನುಮತಿ ದೊರಕಿದ್ದು, ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಬೇಕಾಗಿದೆ. ಈ ಎರಡು ಹಂತದ ನೇಮಕಾತಿ ಮಾಡುವ ಸಮಯದಲ್ಲಿ ಮಾಗಡಿ ತಾಲ್ಲೂಕಿನಲ್ಲಿ ಖಾಲಿ ಇರುವ 4 ಪಶುವೈದ್ಯರ ಹಾಗೂ ರಾಮನಗರ ತಾಲ್ಲೂಕಿನಲ್ಲಿ ಖಾಲಿ ಇರುವ 5 ಪಶುವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಆದ್ಯತೆ ಮೇಲೆ ಪರಿಗಣಿಸಲಾಗುವುದು.

ಖಾಲಿ ಇರುವ ಪಶುವೈದ್ಯಕೀಯ ಮೇಲ್ವಿಚಾರಕರು, ಮತ್ತು ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಮುಂಬಡ್ತಿ ಮೇಲೆ ಭರ್ತಿ ಮಾಡುವ ಕ್ರಮ ಇಲಾಖೆಯಲ್ಲಿದ್ದು ಈ ಬಗ್ಗೆ ಕ್ರಮ ವಹಿಸಲಾಗುತ್ತಿದೆ. 300 ಜನ ಪಶುವೈದ್ಯಕೀಯ ಪರೀಕ್ಷಕರನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು ಕರ್ನಾಟಕ ಲೋಕ ಸೇವಾ ಆಯೋಗದಿಂದ ಪ್ರಕ್ರಿಯೆ ಪ್ರಾರಂಭವಾಗಿದೆ. ಈ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಮುಗಿದು ಭರ್ತಿ ಮಾಡುವಾಗ ಮಾಗಡಿ ಮತ್ತು ರಾಮನಗರ ತಾಲ್ಲೂಕುಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಆದ್ಯತೆ ಮೇಲೆ ಪರಿಗಣಿಸಲಾಗುವುದು.

ಖಾಲಿ ಇರುವ ಪಶುವೈದ್ಯಕೀಯ ಸಹಾಯಕ ಹುದ್ದೆಗಳನ್ನು ಇಲಾಖೆಯಲ್ಲಿನ ಎಸ್.ಎಸ್.ಎಲ್.ಸಿ ಪಾಸಾದ 'ಡಿ' ದರ್ಜೆ ನೌಕರರಿಗೆ ತರಬೇತಿ ನೀಡಿ ಬಡ್ತಿ ಮುಖೇನ ತುಂಬಲು ಕ್ರಮ ವಹಿಸಿದ್ದು ಈಗಾಗಲೇ 244 'ಡಿ' ದರ್ಜೆ ನೌಕರರಿಗೆ ತರಬೇತಿ ನೀಡಲಾಗಿದೆ. ಈ ಮುಂಬಡ್ತಿ ಪ್ರಕ್ರಿಯೆ ಸರ್ಕಾರದ ಪರಿಶೀಲನೆಯಲ್ಲಿದ್ದು, ಪೂರ್ಣಗೊಂಡ ಕೂಡಲೇ ಭರ್ತಿ ಮಾಡಲು ಆದ್ಯತೆ ಮೇಲೆ ಪರಿಗಣಿಸಲಾಗುವುದು. 1400 'ಡಿ' ದರ್ಜೆ ನೌಕರರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಅನುಮತಿಗಾಗಿ ಪ್ರಸ್ತಾಪಿಸಲಾಗಿದ್ದು, ಅನುಮತಿ ದೊರೆತ ನಂತರ ರಾಮನಗರ ಮತ್ತು ಮಾಗಡಿ ತಾಲ್ಲೂಕಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಆದ್ಯತೆ ಮೇಲೆ ಪರಿಗಣಿಸಲಾಗುವುದು.

ಕಟ್ಟಡಗಳು

ಮಾಗಡಿ ತಾಲ್ಲೂಕಿನಲ್ಲಿ 6 ಪಶುವೈದ್ಯ ಸಂಸ್ಥೆಗಳಿಗೆ ಕಟ್ಟಡಗಳು ಇರುವುದಿಲ್ಲ. ಇವುಗಳಲ್ಲಿ ಪಶುಚಿಕಿತ್ಸಾಲಯ, ಕಲ್ಯಾದ ಕಟ್ಟಡವನ್ನು 2008–09ನೇ ಸಾಲಿನ ಆಯವ್ಯಯದಲ್ಲಿ ನಿರ್ಮಾಣ ಮಾಡಲು ಕ್ರಮವಹಿಸಲಾಗಿದೆ.

ಪಶು ಚಿಕಿತ್ಸಾಲಯ, ಬ್ಯಾಲದಕೆರೆ, ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳಾದ ಬಾಣವಾಡಿ ಹಾಗೂ ಬೆಳಗವಾಡಿ ಸಂಸ್ಥೆಗಳ ಕಟ್ಟಡ ನಿರ್ಮಾಣಕ್ಕೆ RIDF-14ರಲ್ಲಿ ಪ್ರಸ್ತಾಪಿಸಲಾಗಿದ್ದು, ಮಂಜೂರಾತಿಗಾಗಿ ಸರ್ಕಾರದ ಪರಿಶೀಲನೆಯಲ್ಲಿದೆ.

ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳಾದ ಕೆ.ಜಿ.ನಗರ ಹಾಗೂ ತಗ್ಗೀಕುಪ್ಪೆ ಸಂಸ್ಥೆಗಳಿಗೆ ಸಂಬಂಧಿಸಿದ ಗ್ರಾಮಪಂಚಾಯತಿಗಳಿಂದ ನಿವೇಶನಗಳನ್ನು ಕೋರಲಾಗಿದ್ದು, ನಿವೇಶನಗಳನ್ನು ಇಲಾಖೆಗೆ ನೀಡಿದ ಕೂಡಲೇ ಕಟ್ಟಡ ನಿರ್ಮಾಣಕ್ಕೆ ಕ್ರಮವಹಿಸಲಾಗುವುದು.

ರಾಮನಗರ ತಾಲ್ಲೂಕಿನಲ್ಲಿ 6 ಪಶುವೈದ್ಯ ಸಂಸ್ಥೆಗಳಿಗೆ ಸ್ವಂತ ಕಟ್ಟಡಗಳು ಇರುವುದಿಲ್ಲ. ಇವುಗಳಲ್ಲಿ ಪಶು ಚಿಕಿತ್ಸಾಲಯ, ಅಕ್ಕೂರು ಸಂಸ್ಥೆಯ ಕಟ್ಟಡಕ್ಕೆ ನಬಾರ್ಡ್ RIDF-13ರಲ್ಲಿ ಹಾಗೂ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ, ಹುಣಸೇನಹಳ್ಳಿಯ ಕಟ್ಟಡಕ್ಕೆ ನಬಾರ್ಡ್ RIDF-12ರಲ್ಲಿ ಮಂಜೂರಾಗಿದ್ದು, ಕಟ್ಟಡ ನಿರ್ಮಾಣಕ್ಕೆ ಈಗಾಗಲೇ ಕ್ರಮವಹಿಸಲಾಗಿದೆ.

ಪಶು ಚಿಕಿತ್ಸಾಲಯಗಳಾದ ಇಟ್ಟಮಡು, ಎಸ್.ಆರ್.ಎಸ್. ಬೆಟ್ಟ ಹಾಗೂ ಬಿಳಗುಂಬ ಸಂಸ್ಥೆಗಳ ಕಟ್ಟಡ ನಿರ್ಮಾಣ ಸಂಬಂಧ RIDF-14ರಲ್ಲಿ ಪ್ರಸ್ತಾಪಿಸಲಾಗಿದ್ದು, ಮಂಜೂರಾತಿಗಾಗಿ ಸರ್ಕಾರದ ಪರಿಶೀಲನೆಯಲ್ಲಿದೆ.

ಪಶು ಚಿಕಿತ್ಸಾಲಯ, ಗಾಣಕಲ್ಲುವಿಗೆ ನಿವೇಶನ ಲಭ್ಯವಿಲ್ಲದ ಕಾರಣ ಗ್ರಾಮ ಪಂಚಾಯಿತಿಯಿಂದ ನಿವೇಶನ ಪಡೆಯಲು ಕ್ರಮವಹಿಸಲಾಗಿದೆ. ಹಾಗೂ ನಿವೇಶನ ದೊರೆತ ನಂತರ ಕಟ್ಟಡ ನಿರ್ಮಾಣಕ್ಕೆ ಸೂಕ್ತ ಕ್ರಮವಹಿಸಲಾಗುವುದು.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಮಾಗಡಿ ತಾಲ್ಲೂಕಿನಲ್ಲಿರುವಂತಹ ಪಶು ಚಿಕಿತ್ಸಾಲಯಗಳಲ್ಲಿ ಸಿಬ್ಬಂದಿ ಹಾಗೂ ಕಟ್ಟಡಗಳ ಕೊರತೆ ಇರುವುದು ನಿಜವೇ ಎಂದು ಪ್ರಶ್ನೆ ಕೇಳಿದ್ದೇನೆ. ಅವರು ಹೌದು ಎಂದು ಉತ್ತರವನ್ನು ಕೊಟ್ಟಿದ್ದಾರೆ. ಅದನ್ನು ಯಾವ ರೀತಿಯಾಗಿ ತುಂಬುತ್ತೇವೆಂಬ ಬಗ್ಗೆಯೂ ಸಹ ಹೇಳಿದ್ದಾರೆ. ನಾನು ಮಾನ್ಯ ಮಂತ್ರಿಗಳನ್ನು ಕೇಳುವುದು ಇಷ್ಟೇ, ನೀವು ಲೋಕಸೇವಾ ಆಯೋಗದಿಂದ

ಹುದ್ದೆಗಳನ್ನು ತುಂಬುತ್ತೀರೋ ಅಥವಾ ಮುಂಬಡ್ತಿ ಮಾಡಿ ತುಂಬುತ್ತೀರೋ ಎಷ್ಟು ದಿವಸಗಳಲ್ಲಿ ತುಂಬುತ್ತೀರೆಂದು ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರ ಬಗ್ಗೆ ನನಗೆ ಸ್ಪಷ್ಟವಾದಂತಹ ಉತ್ತರವನ್ನು ತಾವು ಕೊಡಬೇಕು. ಮತ್ತೆ ಕಟ್ಟಡದ ಕೊರತೆಯ ಬಗ್ಗೆ ಕೇಳಿದಾಗ RIDF-14ರಲ್ಲಿ ಪ್ರಸ್ತಾಪಿಸಲಾಗಿದ್ದು ಮಂಜೂರಾತಿಗಾಗಿ ಸರ್ಕಾರದಲ್ಲಿ ಪರಿಶೀಲನೆಯಲ್ಲಿದೆ ಎಂದು ಉತ್ತರ ಕೊಟ್ಟಿದ್ದಾರೆ. ಅಂದರೆ ಇದನ್ನು ಮಂಜೂರಾತಿ ಮಾಡುತ್ತೀರೋ ಅಥವಾ ಪರಿಶೀಲನೆ ಮಾಡುತ್ತೀರೋ ದಯಮಾಡಿ ಇದಕ್ಕೆ ಮಂಜೂರಾತಿಯನ್ನು ಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನೆರಡು ಕಡೆ ಇದಕ್ಕೆ ಜಾಗ ಕೊಟ್ಟರೆ ಮಂಜೂರು ಮಾಡಿಕೊಡುತ್ತೇವೆಂದು ತಾವು ಹೇಳಿದ್ದೀರಿ, ನಾವು ಸ್ಥಳವನ್ನು ಕೊಡುತ್ತೇವೆ. ಎಷ್ಟು ದಿವಸಗಳಲ್ಲಿ ತಾವು ಮಂಜೂರಾತಿಯನ್ನು ಮಾಡಿಕೊಡುತ್ತೀರಿ ಎಂದು ಈ ಮೂರು ಪ್ರಶ್ನೆಗಳಿಗೆ ತಾವು ಉತ್ತರವನ್ನು ಕೊಡಬೇಕು.

ಶ್ರೀ ರೇವುನಾಯಕ್ ಬೆಳಮಗಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಕೊರತೆ ಇದೆ. ಹೌದು ಎಂದು ನಾನು ಒಪ್ಪಿದ್ದೇನೆ. ಕೊರತೆಯು ಯಾವ ರೀತಿಯಲ್ಲಿ ನೀಗಿಸುತ್ತೀರೆಂದು ಕೇಳಿದ್ದಾರೆ, 200 ಪಶುವೈದ್ಯ ಡಾಕ್ಟರ್‌ಗಳನ್ನು ನೇಮಕಾತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಪ್ರಕ್ರಿಯೆ ಆರಂಭವಾಗಿದೆ. 100 ಜನ ನಿವೃತ್ತಿ ಹೊಂದಿದ ಡಾಕ್ಟರ್‌ಗಳ ನೇಮಕಾತಿಗೆ ಸರ್ಕಾರದಿಂದ ಅನುಮತಿಯೂ ಸಿಕ್ಕಿದೆ. ಆ ಎರಡು ಆದೇಶವಾದ ತಕ್ಷಣ ರಾಮನಗರ ಮತ್ತು ಮಾಗಡಿಗಳಲ್ಲಿ ಏನು ಕೊರತೆ ಇದೆ ಆ ಕೊರತೆಯನ್ನು ನೀಗಿಸಲು ಆದ್ಯತೆ ಮೇರೆಗೆ ಪರಿಗಣಿಸುತ್ತೇನೆ. ಇದರ ಜೊತೆಯಲ್ಲಿ ಖಾಲಿ ಇರುವ ಪಶುವೈದ್ಯ ಮೇಲ್ವಿಚಾರಕರು ಮತ್ತು ಪಶುವೈದ್ಯ ಪರೀಕ್ಷಕರ ಹುದ್ದೆಗಳನ್ನು ಮುಂಬಡ್ತಿಯ ಮೇಲೆ ಭರ್ತಿ ಮಾಡಲು ಕ್ರಮವನ್ನು ಕೈಗೊಳ್ಳಲಾಗುತ್ತಿದೆ. ಈ ಬಗ್ಗೆ 300 ಪಶುವೈದ್ಯಕೀಯ ಪರೀಕ್ಷಕರನ್ನು ನೇಮಿಸುವ ಪ್ರಕ್ರಿಯೆ ಕರ್ನಾಟಕ ಲೋಕಸೇವಾ ಆಯೋಗದಿಂದ ಪ್ರಾರಂಭವಾಗಿದೆ. ಆ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿ ಆದೇಶ ಸಿಕ್ಕಿದ ತಕ್ಷಣ ರಾಮನಗರ ಮತ್ತು ಮಾಗಡಿಗೆ ಹಂತ ಹಂತವಾಗಿ ಪರಿಗಣಿಸಲಾಗುವುದು.

ಶ್ರೀ ಹೆಚ್.ಸಿ. ಬಾಲಕೃಷ್ಣ : ಆದೇಶ ಬಂದ ತಕ್ಷಣ ಅಂದರೆ ಎಷ್ಟು ದಿವಸಗಳಲ್ಲಿ ತುಂಬಿಸಿಕೊಡುತ್ತೀರಿ. 2–3–4 ತಿಂಗಳೇ, RIDF-14ರಲ್ಲಿ ಬಿಲ್ಡಿಂಗ್ ಸಂಬಂಧಪಟ್ಟ ಹಾಗೆ ಇಲ್ಲಿ ಪ್ರಸ್ತಾಪಿಸಲಾಗಿದ್ದು ಎಂದು ಹೇಳಿದ್ದೀರಿ, ಅದು ಬರೀ ಪ್ರಸ್ತಾವನೆಯಲ್ಲಿ

ಇದೆಯೇ ಅಥವಾ RIDF-14ರಲ್ಲಿ ಅದನ್ನು ತೆಗೆದುಕೊಳ್ಳುತ್ತೀರಾ? ನಿವೇಶನವನ್ನು ಕೊಟ್ಟರೆ ಮಂಜೂರಾತಿಯನ್ನು ಕೊಡುತ್ತೀರಾ? ಈ ಮೂರೇ ಪ್ರಶ್ನೆ, ನೀವು ಎಷ್ಟು ದಿವಸದಲ್ಲಿ ಮಾಡುತ್ತೀರೆಂದು ಹೇಳಬೇಕು. ಲೋಕಸೇವಾ ಆಯೋಗದಲ್ಲಿ ಪ್ರಸ್ತಾವನೆಯಲ್ಲಿದೆ, ಮುಂಬಡ್ತಿಯನ್ನು ಕೊಡುತ್ತಿದ್ದೇವೆ, ನೀವೇ ಮಂತ್ರಿಗಳಾಗಿರುವುದರಿಂದ ತಾವೇ ಅದನ್ನು ಕೊಡಬಹುದು. ಇದನ್ನು ಎಷ್ಟು ಬೇಗನೆ ಸಾಧ್ಯವೋ ಅಷ್ಟು ಬೇಗನೇ ಮಾಡಬಹುದು. ದಯಮಾಡಿ 1–2 ತಿಂಗಳಲ್ಲಿ ಮಾಡಿ ಮುಗಿಸುತ್ತೇನೆಂದು ತಾವು ಹೇಳಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳು ಹಾಲಿಗೆ 2 ರೂಪಾಯಿ ಸಬ್ಸಿಡಿಯನ್ನು ಸರ್ಕಾರದಿಂದ ಕೊಡುತ್ತಿದ್ದಾರೆ. ಅದರಿಂದ ಪಶುಗಳ ಸಂಖ್ಯೆಯೂ ಜಾಸ್ತಿಯಾಗಬಹುದು ಎಂದು ಒಂದು ಆಸೆಯನ್ನು ಇಟ್ಟುಕೊಂಡು ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಇದರ ಬಗ್ಗೆ ತಾವು ದಯಮಾಡಿ ಸ್ಪಷ್ಟವಾದ ಉತ್ತರವನ್ನು ಕೊಡಬೇಕು.

ಶ್ರೀ ರೇವುನಾಯಕ್ ಬೆಳಮಗಿ : ನಿವೇಶನ ಲಭ್ಯವಾದ ತಕ್ಷಣ ಇದನ್ನು ಪ್ರಾರಂಭ ಮಾಡುತ್ತೇವೆ. ಮಾಗಡಿ ಮತ್ತು ರಾಮನಗರಕ್ಕೆ 6–6 ಬಿಲ್ಡಿಂಗ್ಸ್ ಬೇಕಾಗಿದೆ. ಇದನ್ನು ಪರಿಶೀಲನೆ ಮಾಡಿ ಹಂತ ಹಂತವಾಗಿ ಪೂರ್ಣಗೊಳಿಸುತ್ತೇವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ನಾವು ಜಾಗವನ್ನು ಕೊಟ್ಟರೆ ತಾವು ಬಿಲ್ಡಿಂಗ್ ಅನ್ನು ಕಟ್ಟಿಕೊಡುತ್ತೇವೆಂದು ಹೇಳಿದ್ದೀರಿ. ನಾವು ಜಾಗವನ್ನು ಕೊಡುತ್ತೇವೆ.

ಶ್ರೀ ರೇವುನಾಯಕ್ ಬೆಳಮಗಿ : ಜಾಗವನ್ನು ಕೊಟ್ಟರೆ ತಕ್ಷಣವೇ ಪ್ರಾರಂಭ ಮಾಡುತ್ತೇವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಸಿಬ್ಬಂದಿ ತುಂಬುವ ಬಗ್ಗೆ ಎಷ್ಟು ದಿವಸಗಳಲ್ಲಿ ಮುಗಿಸುತ್ತೀರಿ ? ಈಗಾಗಲೇ ಪ್ರಕ್ರಿಯೆಯನ್ನು ಮಾಡುತ್ತಿದ್ದಾರೆ. ಇದನ್ನು ತಾವು ಆದಷ್ಟು ಬೇಗನೆ ಮುಗಿಸಬಹುದು. ಇಷ್ಟು ದಿವಸಗಳಲ್ಲಿ ಮುಗಿಸುತ್ತೇವೆ, ಇಷ್ಟು ದಿವಸಗಳಲ್ಲಿ ತುಂಬುತ್ತೇವೆಂದು ತಾವು ಹೇಳಬೇಕು.

ಶ್ರೀ ರೇವುನಾಯಕ್ ಬೆಳಮಗಿ : ಇಡೀ ರಾಜ್ಯದಲ್ಲಿ ಡಾಕ್ಟರ್ಸ್ ಆದಿಯಾಗಿ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳು 17,305 ಖಾಲಿ ಇವೆ.

ಅಧ್ಯಕ್ಷರು : ಮಾನ್ಯ ಸಚಿವರೇ ಆದಷ್ಟು ಬೇಗನೆ ಮಾಡುತ್ತೇವೆಂದು ಹೇಳಿ. ಈಗ ಹುದ್ದೆಗಳನ್ನು ಫಿಲ್‌ಅಪ್ ಮಾಡುತ್ತಿದ್ದಾರೆ.

ಶ್ರೀ ರೇವುನಾಯಕ್ ಬೆಳಮಗಿ : ಈಗ 5,227 ಕೊರತೆ ಇದೆ. ಎಲ್ಲವನ್ನು ಸಂಪೂರ್ಣವಾಗಿ ತುಂಬಬೇಕಾದರೆ ಒಮ್ಮೆಗೆ ಆಗುವುದಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಎಷ್ಟು ದಿವಸಗಳಲ್ಲಿ ಮಾಡುತ್ತೀರೆಂದು ತಾವು ಹೇಳಬೇಕು. 2–3 ತಿಂಗಳಲ್ಲಿ ತುಂಬುತ್ತೇವೆಂದು ಹೇಳಿ. ನಾಳೆ ತುಂಬಿ ಎಂದು ನಾವು ಕೇಳುತ್ತಿಲ್ಲ. ಇಲ್ಲಿ ನಿಮಗೂ ತೊಂದರೆ ಇದೆ. 2–3 ತಿಂಗಳಲ್ಲಿ ತುಂಬುತ್ತೇವೆ ಅಥವಾ ಅದರ ಬದಲು ಅಲ್ಲಿ ಖಾಲಿ ಇರುವಂತದ್ದರ ಬಗ್ಗೆ ಪರ್ಯಾಯ ವ್ಯವಸ್ಥೆಯನ್ನು ತಾವು ಮಾಡುತ್ತೀರಾ ? ಅದನ್ನಾದರೂ ತಾವು ಹೇಳಿ.

ಅಧ್ಯಕ್ಷರು : ಮಾನ್ಯ ಸಚಿವರೆ, ಭರ್ತಿ ಮಾಡಿದ ತಕ್ಷಣ ಮಾಡುತ್ತೇವೆಂದು ಹೇಳಿ.

ಶ್ರೀ ರೇವು ನಾಯಕ್ ಬೆಳಮಗಿ : ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ಅವಧಿ ಮುಗಿದಿದೆ. ಪ್ರಶ್ನೋತ್ತರವು 1 ತಾಸು 10 ನಿಮಿಷಗಳು ಆಗಿದೆ. ನಾನು ಪ್ರಶ್ನೋತ್ತರಕ್ಕೆ ಅವಕಾಶವನ್ನು ಕೊಡುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು : ಪ್ರಶ್ನೆಯನ್ನು ಕೇಳುವುದಕ್ಕೆ ನಮಗೆ ಅವಕಾಶವನ್ನು ತಾವು ಕೊಡಬೇಕು.

ಅಧ್ಯಕ್ಷರು : ನಾನು ಅವಕಾಶವನ್ನು ಕೊಡುವುದಿಲ್ಲ. ಈಗ ಪ್ರಶ್ನೋತ್ತರ ಮುಗಿದಿದೆ. ಏನೂ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಶಾಸಕರುಗಳು ಸಹಕಾರ ಕೊಡಬೇಕು. ಏಕೆಂದರೆ, ನಾನು ಒಂದು ತಾಸು ಅವಕಾಶ ಕೊಟ್ಟಿದ್ದೇನೆ. ನಾನು ಮೊದಲೇ ಹೇಳಿದ್ದೇನೆ.

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಸದಸ್ಯರಾದ ನಾಡಗೌಡರಿಗೆ ಸಂಬಂಧಿಸಿದ ಒಂದು ಪ್ರಶ್ನೆಯನ್ನು ಮೊನ್ನೆ ಸಹ ಮುಂದಕ್ಕೆ ಹಾಕಿದ್ದೀರಿ.

ಅಧ್ಯಕ್ಷರು : ಅದನ್ನು ಮುಂದಿನ ವಾರ ತೆಗೆದುಕೊಳ್ಳುತ್ತೇನೆ. ಹೀಗೆ ಮಾಡಿದರೆ ಹೇಗೆ ? ನೀವೇ ಹೇಳಿ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ನಿಮ್ಮಲ್ಲಿ ನಮ್ಮ ವಿನಂತಿ ಏನೆಂದರೆ, ಯಾರ್ಯಾರು ಸೀನಿಯರ್ಸ್ ಇದ್ದಾರೋ, ಅವರಿಗೆಲ್ಲಾ ಹೆಚ್ಚು ಹೊತ್ತು ಮಾತನಾಡಲು ಅವಕಾಶ ಕೊಟ್ಟುಬಿಡುತ್ತೀರಿ.

ಅಧ್ಯಕ್ಷರು : ಸೀನಿಯರ್ಸ್‌ಗೆ ಮಾತ್ರ ಅಲ್ಲ, ಎಲ್ಲರಿಗೂ ಅವಕಾಶ ಕೊಟ್ಟಿದ್ದೇನೆ.